'ಅನುಭಾವದ ಸೂಕ್ಷ್ಮಾನುಭವಗಳು' ಹೀಗೆ ಪರಕಾಯಪ್ರವೇಶ ಮಾಡಿಯೇ ನಮ್ಮ ಇಂದ್ರಿಯಗಳನ್ನು ಸ್ಪರ್ಶಿಸುತ್ತವೆ. ಇಲ್ಲಿ ಐರ್ಲೆಂಡಿನ ಮಹಾಕವಿ ಡಬ್ಲ್ಯು.ಬಿ. ಯೇಟ್ಸ್ ನೆನಪಿಗೆ ಬರುತ್ತಾನೆ. ಅವನಿಗೂ ವಿಶಿಷ್ಟ ಕನಸುಗಳು ಬೀಳುತ್ತಿದ್ದವು, ಬೇರೆ ಬೇರೆ ದನಿಗಳು ಕೇಳಿಸುತ್ತಿದ್ದವು, ಹೊಸ ಹೊಸ 'ದರ್ಶನ'ಗಳು ಲಭಿಸುತ್ತಿದ್ದವು. ಅವುಗಳನ್ನು ಅಭಿವ್ಯಕ್ತಿಸುವುದಕ್ಕಾಗಿ ಅವನು ಬೇರೆಯದೇ ಆದೊಂದು ಕಾವ್ಯನಾಮವನ್ನು ಆವಾಹಿಸಿಕೊಳ್ಳಲಿಲ್ಲ. ಆದರೆ ನಮ್ಮ ಬೇಂದ್ರೆಯವರು ತಮಗಾಗಿ ಪಾತ್ರಗಳೇ ಅಂಕಗಳ ಕೆಲಸವನ್ನು ನಿರ್ವಹಿಸುವಂಥ ನಾಟಕವೊಂದನ್ನು ರಚಿಸಿಕೊಳ್ಳಬೇಕಾಯಿತು. ಒಂದು ರೀತಿಯಲ್ಲಿ ಅದು ಶೇಕ್ಸ್‌ಪಿಯರ್ ಒಬ್ಬನೇ ಬರೆದ ಹ್ಯಾಮ್ಲೆಟ್, ಫಾಲ್‌ಸ್ಟಾಫ್, ಒಥೆಲೊ, ಲಿಯರ್ ಮುಂತಾದ ವಿಭಿನ್ನ ಪಾತ್ರಗಳ ಸ್ವಗತಗಳಿದ್ದಂತೆ. ಅದಕ್ಕೇ ಇರಬೇಕು, ಆತ್ಮನಿವೇದನ ಎಂಬ ಸ್ವಗತ ಸಂವಾದ / ವಾ.ದ. ಬೇಂದ್ರೇನಿಗೂ ತಿಳಿಯದಾ ಭೇದ ಎಂದವರು ಹೇಳಿದ್ದು. ವಾ.ದ. ಬೇಂದ್ರೆ ಎಂದರೆ ವಾಮನ ಬೇಂದ್ರೆಯವರಲ್ಲವೆ? ಬೇಂದ್ರೆಯವರ ಅಥೆಂಟಿಕ್ ವ್ಯಾಖ್ಯಾನಕಾರ ಎಂದುಕೊಂಡಿದ್ದ ಅವರು ಕೂಡ ಬೇಂದ್ರೆಯವರನ್ನು ಪೂರ್ತಿಯಾಗಿ ಅರಿಯಲಾರರೆಂಬ ಭಾವ ಇಲ್ಲಿನದು. 'ನಾಕುತಂತಿ'ಯ ಮುನ್ನುಡಿಯಲ್ಲಿರುವ ಈ ಭಾಗವನ್ನು ನೋಡಿ: "ಕ್ಲಿಷ್ಟತೆ, ದುರೂಹತೆ, ಅವರವರ ಸಂಸ್ಕಾರ ಬಂಧನಗಳು. ಸಮ್ಯಕ್ ಶಿಕ್ಷಣದಿಂದಲೇ ಹಳೆಯ ಬಂಧ ಹರಿಯಬೇಕು, ಹೊಸ ಬಂಧ ತೆರಿಯಬೇಕು. 'ಅಂಬಿಕಾತನಯದತ್ತ'ನ ಕವನಗಳಿಗೆ ಸ್ವಾಗತ ನೀಡುತ್ತ ಬಂದಿರುವ ಸಹೃದಯರಿಗೆಲ್ಲ 'ಬೇಂದ್ರೆ' ಆಭಾರಿಯಾಗಿದ್ದಾನೆ: ತನ್ನ ಲಿಪಿಕಾರತೆಯ ಕಾಯಕ ವ್ಯರ್ಥವಲ್ಲವೆಂದು, ತನ್ನ ಸ್ವಚ್ಛಂಧ ಗಮಕ ಕೇವಲ ನಿಷ್ಫಲವಲ್ಲವೆಂದು. ಈ ಪದಗಳನ್ನು ನೋಡಿ, ಕೇಳಿ ಕ್ಷೋಭೆಗೊಳ್ಳುವವರಿಗೂ, ತಾತ್ಸಾರಗೊಳ್ಳುವವರಿಗೂ 'ಪ್ರೊ. ಬೇಂ.ಮಾ.' ಸಹಾನುಭೂತಿ ತೋರಿಸದೆ ಇರಲಾರ."



ಫರ್ನಾಂದೊ ಪೆಸೋಆ

ಬೇಂದ್ರೆಯವರ 'ಅಮರ ಬೀಜ' ಎಂಬ ಈ ಕವನದ ಕಡೆಯ ಮೂರು ಸಾಲುಗಳ ಅರ್ಥವೇನು?

ದ ರಾ ಬೇಂದ್ರೆ
ಔದುಂಬರ ದತ್ತ
ದ.ರಾ. ಬೇಂದ್ರೆ ಸಹಿ ಮಾಡುತ್ತಾನೆ.
ದೇಹಗಲಿತ
ವಿದೇಹಿಯಾದ ಮೇಲೂ
ಕವಿ ಅಂಬಿಕಾತನಯದತ್ತ—